ಕಡಬದ ಸಬ್‌ಸ್ಟೇಷನ್ ಕಾಮಗಾರಿ.

63 - ಶ್ರೀ ಎನ್. ಅಂಗಾರ (ಸುಳ್ಯ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸುಳ್ಯ ವಿಧಾನ ಸಭಾಕ್ಷೇತ್ರದ ಕಡಬದಲ್ಲಿ ಕೈಗೊಂಡಿರುವ 33:11 ಕೆ.ವಿ. ಸಬ್‌ಸ್ಟೇಷನ್ ಕಾಮಗಾರಿಯು ಎಂದು ಪ್ರಾರಂಭಿಸಲಾಯಿತು ಹಾಗೂ ಎಂದು ಪೂರ್ಣಗೊಳ್ಳುವುದು?

ಶ್ರೀ ಜೆ.ಹೆಚ್. ಪಟೇಲ್ (ಉಪಮುಖ್ಯಮಂತ್ರಿಗಳು) :

ಅ) ಸುಳ್ಯ ವಿಧಾನ ಸಭಾ ಕ್ಷೇತ್ರದ ಕಡಬದಲ್ಲಿ ಕೈಗೊಂಡಿರುವ 33:11 ಕೆ.ವಿ. ಸಬಸ್ಟೇಷನ್ ಕಾಮಗಾರಿಯನ್ನು ಡಿಸೆಂಬರ್ 93ರಲ್ಲಿ ಪ್ರಾರಂಭಿಸಲಾಯಿತು. ಈ ಕಾಮಗಾರಿಯನ್ನು ಮಾರ್ಚ 96ರ ಅಂತ್ಯದ ವೇಳೆಗೆ ಪೂರ್ಣಗೊಳಿಸುವ ಗುರಿಯನ್ನು ಹೊಂದಲಾಗಿದೆ.

ಖಾಸಗಿ ವಲಯವನ್ನು ಪ್ರವಾಸೋದ್ಯಮದಲ್ಲಿ ತೊಡಗಿಸಿ ಕೊಳ್ಳುವಿಕೆ.

64 - ಶ್ರೀ ಎನ್. ರಾಜಣ್ಣ (ಭಾರತೀನಗರ) : ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1995-96 ಸಾಲಿನಲ್ಲಿ ಪ್ರವಾಸೋದ್ಯಮ ವಲಯದಲ್ಲಿ ಖಾಸಗಿಯವರನ್ನು ತೊಡಗಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ?

ಆ) ಹಾಗಿದ್ದಲ್ಲಿ ನಿರೀಕ್ಷಿಸಲಾಗಿರುವ ಒಟ್ಟು ಖಾಸಗಿ ಬಂಡವಾಳ ಹೂಡಿಕೆ.

ಇ) ರಾಜ್ಯದ ಪ್ರವಾಸೋದ್ಯಮ ವಲಯದಲ್ಲಿ ಖಾಸಗಿ ವಲಯ ಕೈಗೊಳ್ಳಲಾಗುವ ಪ್ರಸ್ತಾಪಿತ ಯೋಜನೆಗಳ ವಿವರ?

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) :

ಅ) ಹೌದು.

ಆ) ರೂ. 250.00 ಕೋಟಿಗಳು.

ಇ) ವಸತಿ, ಸಾರಿಗೆ ವಿನೋದೋದ್ಯಾನ ವನಗಳು, ರೆಸ್ಟಾರ್ಟ್ಸ್, ಗಾಲ್ಫ ಕೋರ್ಸ್, ಜಲಕ್ರೀಡೆ, ರೋಪ್‌ವೇ.

ಬೇಲೂರು ಪಟ್ಟಣಕ್ಕೆ ಹೊಸ ಸೇತುವೆ ನಿರ್ಮಾಣ

65 - ಶ್ರೀ ಹೆಚ್.ಕೆ. ಕುಮಾರಸ್ವಾಮಿ (ಬೇಲೂರು) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೇಲೂರು ಪಟ್ಟಣ ಪ್ರದೇಶಕ್ಕೆ ಈಗಿರುವ ಸೇತುವೆ ಕಿರಿದಾಗಿದ್ದು ವಾಹನಗಳ ಸಂಖ್ಯೆ ಹೆಚ್ಚಾಗಿದ್ದುದರಿಂದ ಶಿಥಿಲಗೊಂಡಿದ್ದು ವಾಹನಗಳ ಏಕಮುಖವಾಗಿ ಸಂಚರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಅ) *ಹೊಸ ಸೇತುವೆ ನಿರ್ಮಾಣಕ್ಕಾಗಿ 1.65 ಕೋಟಿ ರೂ.ಗಳ ಅಂದಾಜು ಪಟ್ಟಿ ತಯಾರಿಸಲಾಗಿದ್ದು, ಈ ಅಂದಾಜು ಪಟ್ಟಿಯು ಸರ್ಕಾರದ ಯಾವ ಹಂತದಲ್ಲಿದೆ?*

ಶ್ರೀ ಶಿವಾನಂದ ಹೆಚ್. ಕೌಜಲಗಿ (ಲೋಕೋಪಯೋಗಿ ಸಚಿವರು):

ಅ) ಈ ಸೇತುವೆಯು ಕಿರಿದಾಗಿರುವುದು ನಿಜ. ಆದರೆ ಸೇತುವೆ ಸುಸ್ಥಿತಿಯಲ್ಲಿದೆ.

ಆ) ಈಗಿರುವ ಸೇತುವೆ ಪಕ್ಕದಲ್ಲಿ ಹೊಸ ಸೇತುವೆ ನಿರ್ಮಿಸಲು ರೂ. 175.00 ಲಕ್ಷಗಳ ರೇಖಾ ಅಂದಾಜು ಮಾತ್ರ ಮಾಡಲಾಗಿದೆ. ಹಾಲಿ ಇರುವ ಸೇತುವೆಯು ಈಗ ಸುಸ್ಥಿತಿಯಲ್ಲಿರುವುದರಿಂದ ಅನುದಾನದ ಕೊರತೆಯಿಂದ ಹೊಸ ಸೇತುವೆ ನಿರ್ಮಾಣ ಕೈಗೊಳ್ಳಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ಅಂದಾಜು ಪ್ರಸ್ತಾವನೆ ಬಗ್ಗೆ ಕ್ರಮ ಕೈಗೊಳ್ಳಲು ಸಾಧ್ಯವಾಗಿಲ್ಲ.

ಜಿಲ್ಲಾಪಂಚಾಯ್ತಿ, ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮ ಪಂಚಾಯ್ತಿಗೆ ಹಣ ಬಿಡುಗಡೆ

66 - ಶ್ರೀ ವೈ. ರಾಮಕೃಷ್ಣ (ಆನೇಕಲ್) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಜಿಲ್ಲಾ ಪಂಚಾಯತ್ ತಾಲ್ಲೂಕು ಪಂಚಾಯತ್, ಗ್ರಾಮ ಪಂಚಾಯತ್‌ಗಳು ಅಸ್ತಿತ್ವಕ್ಕೆ ಬಂದ ಮೇಲೆ ಅವುಗಳು ಯಶಸ್ವಿಯಾಗಿ ಕಾರ್ಯಭಾರ ನೆರವೇರಿಸಲು ಸರ್ಕಾರ ಪ್ರತಿಯೊಂದು ಪಂಚಾಯಿತಿಗೆ (ಅಂದರೆ ಗ್ರಾಮ, ತಾಲ್ಲೂಕು ಮತ್ತು ಜಿಲ್ಲಾ) ಕಾಯಿದೆ ಪ್ರಕಾರ ಕೊಡಬೇಕಾದ ಹಣವೆಷ್ಟು? ಈಗ ಕೊಟ್ಟಿರುವ ಹಣವೆಷ್ಟು? ತಡವಾಗಿದ್ದರೆ, ತಡವಾಗಲು ಕಾರಣಗಳೇನು?*

ಆ) *ಈ ಸಂಸ್ಥೆಗಳಿಗೆ ಚುನಾವಣೆ ನಡೆಸಲು ತೋರಿಸಿದ ಆಸಕ್ತಿಯನ್ನು ಅವುಗಳು ಸೂಕ್ತವಾಗಿ ನಡೆಯಲು ತೋರಿಸದಿರಲು ಕಾರಣವೇನು?*

ಇ) *ಜಿಲ್ಲಾ ಪಂಚಾಯ್ತಿಗಳಿಗೆ ಕೊಡುವ ಹಣವೆಷ್ಟು? ಕೇಂದ್ರ ಸರ್ಕಾರದ ಪಾಲೇನು? ಯಾವ ಆಧಾರದ ಮೇಲೆ ಹಣವನ್ನು ಹಂಚಲಾಯಿತಿ (ಜಿಲ್ಲಾವಾರು ವಿವರಗಳನ್ನು ಒದಗಿಸುವುದು)*

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) 1993ರ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮದ ಪ್ರಕಾರ ಪ್ರತಿ ಗ್ರಾಮ ಪಂಚಾಯಿತಿಗೆ ವರ್ಷಕ್ಕೆ ಒಂದು ಲಕ್ಷ ಅನುದಾನವನ್ನು ಮಾತ್ರ ಸರ್ಕಾರದಿಂದ ನೀಡಬೇಕಾಗಿದೆ. ಇದಲ್ಲದೆ, ಪ್ರಕರಣ 207ರ ಪ್ರಕಾರ ಸರ್ಕಾರವು ತಾನು ನಿರ್ಧರಿಸುವಂತಹ ಪ್ರಮಾಣದಲ್ಲಿ ಸಿಬ್ಬಂದಿ ವೆಚ್ಚವನ್ನು ಭರಿಸಲು ಪ್ರತಿಯೊಂದು ತಾಲ್ಲೂಕು ಮತ್ತು ಜಿಲ್ಲಾ ಪಂಚಾಯತ್‌ಗೆ ಅನುದಾನವನ್ನು ಅಲ್ಲದೆ, ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿಗಳ ಕಾರ್ಯಕ್ರಮ ಅನುಷ್ಠಾನಕ್ಕೂ ಸಹ ಅನುದಾನವನ್ನು ನೀಡುತ್ತಿದೆ. 1995ರ ಏಪ್ರಿಲ್ ತಿಂಗಳಿನಲ್ಲಿ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿಗಳು ಅಸ್ತಿತ್ವಕ್ಕೆ ಬಂದಿದ್ದು 1995-96ನೇ ಸಾಲಿನಲ್ಲಿ ಒಟ್ಟಾರೆ ಜಿಲ್ಲಾ ಪಂಚಾಯತ್ ತಾಲ್ಲೂಕು ಪಂಚಾಯತ್ ಮತ್ತು ಗ್ರಾಮ ಪಂಚಾಯತಗಳಿಗೆ ಯೋಜನೆ ಬಾಬಿನಲ್ಲಿ ರೂ. 110031.37 ಲಕ್ಷ ಹಣ ಹಾಗೂ